## ಜಾಗೃತಿ ಮೂಡಿಸಬಹುದಿತ್ತು

ಕಲರ್ಸ್ ಕನ್ನಡದ 'ಒಲವಿನ ನಿಲ್ದಾಣ' ಚೆನ್ನಾಗಿ ಮೂಡಿಬರುತ್ತಿದೆ. ಇತ್ತೀಚಿನ ಸಂಚಿಕೆಯಲ್ಲಿ ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡಿದ ಪಾತ್ರವೊಂದು, ಮತ್ತೊಂದು ಪಾತ್ರದ ಮುಖದ ಮೇಲೆ ಕೈಯಾಡಿಸಿದ ಸನ್ನಿವೇಶವಿತ್ತು. ಅದು ಸಮಂಜಸವಲ್ಲ. ಬಯಲು ಶೌಚದಂತಹ ಸನ್ನಿವೇಶಗಳನ್ನು ಸೂಕ್ಷ್ಮವಾಗಿ ನಿರ್ವಹಿಸಬೇಕು. ಇಲ್ಲಿ ಶುಚಿತ್ವಕ್ಕೆ ಸಂಬಂಧಿಸಿದಂತೆ ಜಾಗೃತಿಯನ್ನು ಮೂಡಿಸುವ ಪ್ರಯತ್ನವನ್ನಾದರೂ ಮಾಡಬೇಕಿತ್ತು.

—ಸುಂದರ್ ಜಿ.ಕೆ., ಮಂಗಳೂರು

## ಪ್ರತಿಭೆಯ ಅನಾವರಣ

ಸಿರಿ ಕನ್ನಡದ 'ಯುಗಾಂತರ'ದಲ್ಲಿ ಸಂಭಾಷಣೆಯನ್ನು ಸೇತುರಾಮ್ ತುಂಬಾ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ನಿತ್ಯ ಎಷ್ಟೋ ಪ್ರತಿಭಾವಂತರು ಈ ಕಲಾ ಜಗತ್ತಿಗೆ ಆಸೆಗಣ್ಣಿನಿಂದ ಬರುತ್ತಾರೆ. ಈ ಕಾರ್ಪೊರೆಟ್ ವಾತಾವರಣ ಅವರಿಗೆ ಒಗ್ಗದು. ಸರಳತೆಗಿಂತ ತಳಕು ಬಳುಕಿಗೆ ಪ್ರಾಮುಖ್ಯತೆ. ಇಲ್ಲಿ ವರ್ಷಾಳಿಗೆ ಆದ ಅನುಭವ, ಮಾನಸಿಕ ತುಮುಲ, ಅಂತ್ಯದಲ್ಲಿ ಸಿಡಿದೇಳುವ ದೃಶ್ಯವನ್ನು ನಿರ್ದೇಶಕರು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ನಟರ ಅಭಿನಯ ಮತ್ತು ಸಂಭಾಷಣೆ ಕೂಡ ಚೆನ್ನಾಗಿದೆ.

—ಭಾರತೀ ಗಂಗಾಧರ್, ಬೆಂಗಳೂರು

## ಕೃತಕ ನಗು ಬೇಡ

ಕಲರ್ಸ್ ಕನ್ನಡದ 'ರಾಜ ರಾಣಿ', ಝೀ ಕನ್ನಡದ 'ಜೋಡಿ ನಂಬರ್ 1'ಅನ್ನು ಇಷ್ಟ–ಕಷ್ಟದ ನಡುವೆಯೂ ನೋಡುತ್ತೇವೆ. ಇದರಲ್ಲಿರುವ ತೀರ್ಪುಗಾರರು ಹಾಗೂ ಸ್ಪರ್ಧಿಗಳು ಅನೇಕ ಸಂದರ್ಭಗಳಲ್ಲಿ ಕೃತಕ ನಗು ಬೀರುತ್ತಾರೆ. ಇದೂ ಸಹ ನಟನೆಯ ಭಾಗ ಎಂದುಕೊಂಡರೂ, ಒಮ್ಮೆಲೇ ನಗು ಉಕ್ಕಿ ತಕ್ಷಣ ಅದು ನಿಲ್ಲುವುದು ಅಸಹಜ.

ನಗುವುಕ್ಕೂ ಆ್ಯಕ್ಷನ್ ಕಟ್ ಹೇಳುತ್ತಾರೆ ಅನ್ನಿಸುತ್ತದೆ. ಇದನ್ನು ನೋಡಿದವರಿಗೆ ನಗುವಿನ ಬದಲು ಕೋಪ ಬರುತ್ತದೆ. ನಗುವಿನಲ್ಲಿ ನೈಜತೆ ಇರಲಿ. ದಂಪತಿ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪ್ರವೇಶ ಬೇಡ. ನಿರೂಪಕರು ಸ್ಪರ್ಧಿಗಳಿಗೆ ಕೇಳುವ ದಾಂಪತ್ಯದ ಪ್ರಶ್ನೆಗೆ ಸ್ಪರ್ಧಿಗಳು ಉತ್ತರಿಸುತ್ತಾರೆ. ನಾವು ಮಕ್ಕಳಿಗೆ ಆ ಸನ್ನಿವೇಶವನ್ನು ಹೇಗೆ ವಿವರಿಸಬೇಕು?

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಹಳ್ಳಿಗರಿಗೆ ಕೂಲಿಂಗ್ ಗ್ಲಾಸ್?

ಕಲರ್ಸ್ ಕನ್ನಡದ 'ರಾಜ ರಾಣಿ' ಸೀಸನ್ ಎರಡು ಚೆನ್ನಾಗಿದೆ. ನಟಿ ತಾರಾ ಅವರ ಸಲಹೆಗಳು, ನಟ ಸೃಜನ್ ಲೋಕೇಶ್ ಅವರ ಹಾಸ್ಯಚಟಾಕಿ ಅದ್ಭುತ. ಇತ್ತೀಚೆಗೆ ಇದರಲ್ಲಿ ಹಳ್ಳಿಯ ಸಂಭ್ರಮ ಕಾಣಿಸಿಕೊಂಡಿತು. ಹಳ್ಳಿಯ ಜನಜೀವನವನ್ನು ನೈಜವಾಗಿ ತರಲು ಯತ್ನಿಸಿದರು. ಆದರೆ ಹಳ್ಳಿಗರು ಕೂಲಿಂಗ್ ಗ್ಲಾಸ್ ಬಳಸುತ್ತಿದ್ದರೆ?

—ಸೀತಾ ಕೇಶವ ಸಿಡ್ನಿ

## ಸುಖದ ಬದುಕಿಗೆ ಸರಳ ಸೂತ್ರ

ಮನೆಯಲ್ಲಿ ಶಾಂತಿ, ನೆಮ್ಮದಿ ನೆಲೆಸಬೇಕೇ? ನಿಮ್ಮ ಪತ್ನಿ ಆರೋಗ್ಯವಂತಳಾಗಿ ಇರಬೇಕೇ? ಅಳಿಯ–ಮಾವನ ಮನೆಯವರೆಲ್ಲ ಸುಖದಿಂದ ಇರುವಂತೆ ಮಾಡಬೇಕೇ? ಹಾಗಿದ್ದಲ್ಲಿ ಈ ವ್ರತಗಳನ್ನು ಕೂಡಲೇ ಭಕ್ತಿಯಿಂದ ಮಾಡಿ. ಪ್ಯಾಂಟ್–ಶರ್ಟ್ ಧರಿಸಿದ್ದರೂ ಸರಿ, ಬಾವಿಯಿಂದ 300 ಕೊಡ ನೀರು ಸೇದಿ ಮೈ ಮೇಲೆ ಸುರಿದುಕೊಳ್ಳಬೇಕು. ತಲೆ ಒರೆಸಿಕೊಳ್ಳದೇ ಪಂಚೆಯುಟ್ಟು 300 ಬಾರಿ ಮಂಡಿಯೂರಿ ದೇಗುಲಕ್ಕೆ ಪ್ರದಕ್ಷಿಣೆ ಹಾಕಬೇಕು. ಆ ವೇಳೆ ಬೇರೆ ಭಕ್ತರ ಬಳಿ ಭಿಕ್ಷೆ ಕೇಳಿ ಪಡೆದು ಅದನ್ನು ಹುಂಡಿಗೆ ಹಾಕಬೇಕು. ಅಳಿಯ ಮಾಡುವ ವ್ರತ ಇನ್ನೂ ವಿಶಿಷ್ಟ. ಮಡಿಕೆಯಲ್ಲಿ ಕುದಿಯುತ್ತಿರುವ ಅನ್ನವನ್ನು ಬರಿಗೈಯಲ್ಲಿ ತೆಗೆಯಬೇಕು.

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದಲ್ಲಿ ತೋರಿಸಿರುವ ವ್ರತಗಳಿವು. ದಶಕಗಳ ಹಿಂದಕ್ಕೆ ಕರೆದೊಯ್ಯುತ್ತಿರುವ ಈ ಧಾರಾವಾಹಿಯಲ್ಲಿನ ವ್ರತಗಳನ್ನು ನೀವೂ ಅನುಸರಿಸಿ ಭಾಗ್ಯಶಾಲಿಗಳಾಗಬಾರದೇಕೆ?

—ಕೆ. ಶ್ರೀನಿವಾಸ ರಾವ್ ಹರಪನಹಳ್ಳಿ

## ಮನೋಜ್ಞ 'ಡ್ರಾಮಾ'

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್'ನಲ್ಲಿ ಮನೋಜ್ಞ ಕಿರುನಾಟಕಗಳು ಪ್ರಸಾರ ಆಗುತ್ತಿವೆ. ಉಪಯುಕ್ತ ಮಾಹಿತಿಯ ಆ ರೂಪಕಗಳಿಗೆ ಪರಿಣತ ತೀರ್ಪುಗಾರರಿಂದ ಸೂಕ್ತ ವಿಮರ್ಶೆ ಸಿಗುತ್ತಿರುವುದು ಸ್ವಾಗತಾರ್ಹ.

ರೈತರು, ಕಾರ್ಮಿಕರು, ಜನಸಾಮಾನ್ಯರ ಸಮಸ್ಯೆಗಳನ್ನು ಇಲ್ಲಿ ಪ್ರತಿಬಿಂಬಿಸಲಾಗುತ್ತಿದೆ. ದೇಶ–ಸಮಾಜ ಸೇರಿದಂತೆ ಮನುಷ್ಯನ ಭಾವನಾತ್ಮಕ ವಿಷಯಗಳನ್ನು ಅನುಸಂಧಾನ ಮಾಡುವುದು ತುಂಬ ಚೆನ್ನಾಗಿರುತ್ತದೆ.

—ಬಿ.ಎಸ್. ಚಂದ್ರಶೇಖರ್ ಬೆಂಗಳೂರು

## ನಿಂತನೀರಾಗದಿರಲಿ ಕಥೆ

ಝೀ ಕನ್ನಡದ 'ಪುನರ್ ವಿವಾಹ'ದಲ್ಲಿ ಕೂಡುಕುಟುಂಬದ ಕಥೆಯನ್ನು ಸೊಗಸಾಗಿ ತಂದಿದ್ದರು. ಸೊಸೆಯಂದಿರ ನಡವಳಿಕೆಯನ್ನು ಭಿನ್ನಗೊಳಿಸಿ ಕುಟುಂಬದ ಸಮಸ್ಯೆಯ ಸುತ್ತ ಕಥೆ ಸುತ್ತುವಂತೆ ಮಾಡಿದ್ದಾರೆ. ಶೀರ್ಷಿಕೆಗೆ ಸಂಬಂಧಿಸಿದಂತೆ ಕಥೆಯನ್ನು ಮುಂದುವರಿಸುವುದು ಉತ್ತಮ.

—ಶಿವಕುಮಾರ್ ಕೊ. ಬಣಗಾರ, ಬಾಗಲಕೋಟೆ

## ಪಿಸುಗುಡು ಎನ್ನುವುದೇ ಸರಿ

ದೂರದರ್ಶನ ಚಂದನದ ಇತ್ತೀಚಿನ 'ಥಟ್ ಅಂತ ಹೇಳಿ' ನೋಡುವಾಗ ಮೇಲ್ನೋಟಕ್ಕೆ ತಪ್ಪುಗಳು ಕಣ್ಣಿಗೆ ಬೀಳುವುದು ವಿಷಾದ ಅನ್ನಿಸುತ್ತದೆ. ಪದಬಂಧದ ಮೊದಲ ಸುಳಿವು 'ಮೆಲ್ಲಗೆ ಹಾಡಿಕೊಳ್ಳು, ಇಲ್ಲವೆ ಮಾತಾಡು' ಎಂಬುದಕ್ಕೆ ಸ್ಪರ್ಧಿ ಗುನುಗುನಿಸು ಎಂದು ಸರಿಯಾಗಿ ಉತ್ತರಿಸಿದರೂ ಎರಡನೆಯ ಪದ ಉಣುಗು ಬರಬೇಕು, ಆದ್ದರಿಂದ ಉತ್ತರ ತಪ್ಪೆಂದು ಹೇಳಲಾಯಿತು.

ಗುನುಗುನಿಸು ಸರಿಯಾದ ಉತ್ತರ ಎಂದು ತೋರಿಸಲಾಯಿತು. ಮೆಲ್ಲಗೆ ಮಾತಾಡುವುದನ್ನು 'ಪಿಸುಗುಡು' ಇಲ್ಲವೇ 'ಗೊಣಗು' ಎನ್ನಬಹುದೇ ವಿನಃ ಗುನುಗುನಿಸು ಎನ್ನಲಾಗದು. ಪದಬಂಧಕ್ಕೆ ಹೊಂದುವಂತೆ ಮಾಡುವುದಕ್ಕಾಗಿ ಭಾಷೆಯನ್ನು ತಪ್ಪಾಗಿ ಬಳಸುವುದು ಸರಿಯಲ್ಲ. ಈ ರೀತಿ ಗುಣಿಸುತ್ತ ಹೋದರೆ ಭಾಷೆಯಲ್ಲಿ ಪದಗಳು ಅರ್ಥ ಕಳೆದುಕೊಳ್ಳುವ ಜೊತೆಯಲ್ಲೇ ತಪ್ಪುಗಳು ದ್ವಿಗುಣಗೊಳ್ಳುತ್ತವೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಉತ್ತರವೇ ಒಗಟಾಗಿ ಉಳಿದಿದೆ...

ಚಂದನದ 'ಥಟ್ ಅಂತಾ ಹೇಳಿ?' ಕ್ವಿಜ್‌ನ ಕೊನೆಯ ಭಾಗದಲ್ಲಿ ಗಾದೆ–ಒಗಟುಗಳನ್ನು ಕೇಳಲಾಗುತ್ತದೆ. ಆಶ್ಚರ್ಯ ಎಂಬಂತೆ, ಸ್ಪರ್ಧಿಗಳು ಸರಿಯಾದ ಉತ್ತರ ಕೊಟ್ಟರೂ ಅದು ತಪ್ಪು ಎಂದು ಹೇಳುತ್ತಾರೆ. ಉದಾಹರಣೆ: 'ಊರೆಲ್ಲಾ ಸುತ್ತುತ್ತೆ, ಮನೆಗೆ ಬಂದು ಬಾಗಿಲ ಮೂಲೆಯಲ್ಲಿ ಕೂರುತ್ತೆ' ಎಂಬ ಒಗಟಿಗೆ ಸ್ಪರ್ಧಿಗಳಲ್ಲಿ ಒಬ್ಬರು 'ಚಪ್ಪಲಿ' ಎಂದು ಹೇಳಿದರು! ನಿರೂಪಕರು ತಪ್ಪು, ಅದು 'ಛತ್ರಿ' ಎಂದು ತಿಳಿಸಿದರು. ಚಪ್ಪಲಿಯೂ ಸರಿಯಾದ ಉತ್ತರ ಅಲ್ವೇ?

ಕನ್ನಡ ಜನಪದ ಅನಾದಿ ಕಾಲದಿಂದಲೂ ಒಗಟು–ಗಾದೆಗಳನ್ನು ಆಡುಭಾಷೆಯಲ್ಲಿ ಬಳಸುತ್ತಾರೆ. ಉತ್ತರಗಳು ಅವರವರ ಅನುಭವಕ್ಕೆ ಬಂದಂತೆ ಬೇರೆ ಬೇರೆ ರೀತಿಯಲ್ಲಿಯೇ ಇರುತ್ತವೆ. ಇತ್ತೀಚೆಗೆ ಕಾರ್ಯಕ್ರಮಲ್ಲಿ ತುಂಬ ಅಪರೂಪದ ಇಲ್ಲವೇ ಬಹುತೇಕರಿಗೆ ಗೊತ್ತೇ ಇಲ್ಲದ ಒಗಟು–ಗಾದೆಗಳನ್ನು ಕೇಳುತ್ತಾರೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು